ಆ) ಹಾಗಿದ್ದಲ್ಲಿ ಮೇಲ್ಕಂಡ ಯೋಜನೆಗಳನ್ನು ತೀವ್ರಗತಿಯಲ್ಲಿ ಅನುಷ್ಠಾನಕ್ಕೆ ತರುವುದ ಕ್ಕೋಸ್ಕರ ತಾಲ್ಲೂಕುವಾರು ಪ್ರತ್ಯೇಕ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರವರ ಜನಾರೋಗ್ಯ ಶಿಲ್ಪ ಕಾರ್ಯಾಲಯಗಳನ್ನು ತೆಗೆಯುವ ವಿಚಾರ ಸರಕಾರದವರ ಗಮನಕ್ಕೆ ಬಂದಿದೆಯೇ?

ಇ) ಸವದತ್ತಿ ತಾಲ್ಲೂಕಿಗೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರವರ ಜನಾರೋಗ್ಯ ಶಿಲ್ಪಕಾರ್ಯ ಪ್ರಾರಂಭಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ, ಪಸತಿ ಮತ್ತು ವಕ್ಫ್ ಮಂತ್ರಿಗಳು).—

ಆ) ಉಪವಿಭಾಗ ಮಟ್ಟದಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ. ಜನಾರೋಗ್ಯ ಶಿಲ್ಪಕಾರ್ಯಾಲಯವಿರುವುದರಿಂದ ವಿವಿಧ ಯೋಜನೆಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಸಾಮಾನ್ಯವಾಗಿ ವಿಳಂಬವಾಗಿರುವುದಿಲ್ಲ.

ಆ) ಇಂತಹ ಪ್ರಸ್ತಾಪನೆ ಸದ್ಯದಲ್ಲಿ ಇಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಕಾಮಗಾರಿಗಳು ನಡೆಯದೆ ಇರುವುದು

೭೬ (೩೩೬) ಶ್ರೀ ವಿ. ಎಂ. ಹಿಂದುಸಗೇರಿ (ಹುಬ್ಬಳ್ಳಿ).—ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳ, ಆಹಾರ ಹಾಗೂ ನಾಗರೀಕ ಸರಬರಾಜು ಹಾಗೂ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಹುಬ್ಬಳ್ಳಿ-ಧಾರವಾಡ ನಗರಸಭೆ ಪ್ರದೇಶದಲ್ಲಿ ನೀರಿನ ಕೊಳವೆಗಳ ಮತ್ತು ಜಲ ಸಂಗ್ರಹಾಗಾರಗಳ ನಿರ್ಮಾಣದ ಕೆಲಸಕ್ಕಾಗಿ ಜೀವವಿಮಾ ನಿಗಮವು ೭.೦೦ ಕೋಟಿ ರೂ.ಗಳ ಸಾಲ ಕೊಡಲು ಒಪ್ಪಿದ್ದು ನಿಜವೆ?

ಆ) ಕೆಲಸ ಕಾರ್ಯಗತ ಮಾಡಲು ಜೀವವಿಮಾ ನಿಗಮವು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಗೆ ೧.೦೦ ಕೋಟಿ ರೂ. ಗಳನ್ನು ಬಿಡುಗಡೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) ಹಾಗಿದ್ದಲ್ಲಿ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯು ಕೆಲಸ ಕಾರ್ಯಗತ ಮಾಡಲು ಪ್ರಾರಂಭ ಮಾಡಿದೆಯೆ? ಇಲ್ಲದಿದ್ದಲ್ಲಿ ಕೆಲಸ ಕೈಗೊಳ್ಳಲು ತಡ ವಾಗಲು ಕಾರಣವೇನು?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳ ಆಹಾರ ಹಾಗೂ ನಾಗರೀಕ ಮಂತ್ರಿಗಳು).—

ಅ) ಇಲ್ಲ.

ಆ) ಬಂದಿದೆ.

ಇ) ಕೆಲಸಗಳು ಪ್ರಾರಂಭವಾಗಿವೆ.

ಚುಂಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ನಗರಾಭಿವೃದ್ಧಿ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ. ಉತ್ತರದ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ಸ್ವಾಭಾವಿಕ ನೀರಿನ ಉಗಮದ ಉಪಯೋಗದ ಬಗ್ಗೆ

೮೬ (೨೩೩೬) ಶ್ರೀ ಐ. ಬಿ. ಶಂಕರ್ (ಚಿತ್ರದುರ್ಗ). —ಮಾನ್ಯ ಗ್ರಾಮೀಣ ಅಭಿವೃದ್ಧಿ, ವಸತಿ, ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:

ಅ) ಚಿತ್ರದುರ್ಗ ತಾಲ್ಲೂಕಿನಲ್ಲಿ ಸಿಗುವ ಸ್ವಾಭಾವಿಕ ನೀರಿನ ಉಪಯೋಗ ಹೇಗೆಯಾಗುತ್ತಿದೆಯೆ?

ಆ) ಈ ಹಿಂದೆ ಈ ರೀತಿಯ ನೀರನ್ನು ಹಳ್ಳಿಗಳಿಗೆ ಒದಗಿಸುವುದಾಗಿ ತಿಳಿಸಿದ್ದುದು ನಿಜವೆ?

ಇ) ಹಾಗಿದ್ದಲ್ಲಿ ಈ ಬಗ್ಗೆ ಕೈಕೊಂಡ ಕ್ರಮಗಳೇನು?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ, ವಸತಿ ಮತ್ತು ವಕ್ಫ್ ಮಂತ್ರಿಗಳು).—

ಆ) ಚಿಕ್ಕಮಗಳೂರು ಜಿಲ್ಲೆಯಲ್ಲಿ ನೈಸರ್ಗಿಕವಾಗಿ ಹರಿಯುವ ನೀರನ್ನು ಕೊಳಾಯಿ ನೀರು ಸರಬರಾಜು ಯೋಜನೆಗೆ ಬಳಸುತ್ತಿಲ್ಲ.

ಆ) ಇದರಂತೆ ಲಭ್ಯವಿರುವ ವಿವರಗಳ ಪ್ರಕಾರ ಅಂತಹ ಆಶ್ವಾಸನೆಯನ್ನು ಕೊಟ್ಟಿರುವುದಿಲ್ಲ

ಇ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಗ್ರಾಮ ಸೇವಕರನ್ನು ಖಾಯಂಗೊಳಿಸುವ ಬಗ್ಗೆ

೮೭ (೯೫(ಸಿ) ಶ್ರೀ ಎಸ್.ಕೆ. ಕಾಂತಾ (ಗುಲ್ಬರ್ಗ).—ಮಾನ್ಯ ಗ್ರಾಮೀಣ ಅಭಿವೃದ್ಧಿ, ವಸತಿ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಆ) i) ಗುಲ್ಬರ್ಗ ಜಿಲ್ಲೆಯಲ್ಲಿ ಗ್ರಾಮ ಸೇವಕರ ಹುದ್ದೆಯಲ್ಲಿರುವವರ ಸಂಖ್ಯೆ ಎಷ್ಟು? ಮತ್ತು

ii) ಅವರಲ್ಲಿ ಎಷ್ಟು ಜನರಿಗೆ ಖಾಯಂಗೊಳಿಸಲಾಯಿತು?

iii) ಅವರನ್ನು ಯಾವ ವರ್ಷದಲ್ಲಿ ತೆಗೆದುಕೊಳ್ಳಲಾಯಿತು?

ಆ) ಖಾಯಂ ಮಾಡದಿದ್ದರೆ ಅದಕ್ಕೆ ಕಾರಣವೇನು? ಮತ್ತು ಯಾವಾಗ ಖಾಯಂ ಗೊಳಿಸಲಾಗುವುದು?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ವಸತಿ ಮತ್ತು ಪಂಚಾಯತ್ ರಾಜ್ ಸಚಿವರು).—

ಆ) ಗುಲ್ಬರ್ಗ ಜಿಲ್ಲೆಯಲ್ಲಿ ಗ್ರಾಮಸೇವಕರ ಹುದ್ದೆಯಲ್ಲಿರುವವರ ಸಂಖ್ಯೆ ೧೦೦.

i) ಎಲ್ಲ ಗ್ರಾಮಸೇವಕರು ಖಾಯಂ ಸರ್ಕಾರಿ ನೌಕರರು.

ii) ೧೯೫೭ ರಿಂದ ೧೯೬೭ರವರೆಗೆ ತೆಗೆದುಕೊಳ್ಳಲಾಗಿದೆ.

ಆ) ಉದ್ಭವಿಸುವುದಿಲ್ಲ.

ಕಾವೇರಿ ವಂಚಿತರನೇ ಹಂತದ ಬೆಂಗಳೂರು ನಗರ ನೀರು ಸರಬರಾಜು ಯೋಜನೆಯ ಬಗ್ಗೆ

೮೮ (೧೦೬) ಶ್ರೀ ಕೆ.ಹೆಚ್. ಪಾಟೀಲ್ (ಗದಗ).—ಮಾನ್ಯ ಕಾನೂನು ಸಂಸದೀಯ ವ್ಯವಹಾರ ಗಳು, ಆಹಾರ ಮತ್ತು ನಗರಾಭಿವೃದ್ಧಿ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಆ) ಬೆಂಗಳೂರಿನ ನೀರು ಸರಬರಾಜು ಬಗ್ಗೆ ಕಾವೇರಿ ಮೂರನೇ ಹಂತ ಮುಗಿಸಲು ಒಟ್ಟು ಬೇಕಾಗಿರುವ ಹಣವೆಷ್ಟು?

ಆ) ಮೇಲ್ಕಂಡ ಯೋಜನೆಗೆ ಬೇಕಾಗುವ ಹಣ ಸಂಪನ್ಮೂಲಗಳಿಗೆ ರಾಜ್ಯ ಸರ್ಕಾರದವರು ಹಾಕಿಕೊಂಡಿರುವ ಯೋಜನೆಯೇನು?

ಶ್ರೀ ಎ. ಲಕ್ಷ್ಮೀಸಾಗರ್ (ನ್ಯಾಯ ಮತ್ತು ಸಂಸದೀಯ ವ್ಯವಹಾರ, ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ನಗರಾಭಿವೃದ್ಧಿ ಸಚಿವರು).—

ಆ) ಈ ಯೋಜನೆಗೆ ರೂ. ೨೪೦ ಕೋಟಿ ರೂಪಾಯಿ ಬೇಕೆಂದು ಅಂದಾಜು ಮಾಡಲಾಗಿದೆ.